ನಾಂದಿಹಾಡು ನಾಂದಿಹಾಡು

# ಕತೆ ಕತೆ ಕಾರಣ

ಕತೆ ಹೇಳುವುದು ಜಗತ್ತಿನ ಶ್ರೇಷ್ಠಕಲೆಗಳಲ್ಲಿ ಒಂದು. ಅದಕ್ಕೆ ಮನುಷ್ಯ ಅನುಭವವನ್ನು ಶಾಶ್ವತವೆಂಬಂತೆ ದಾಖಲಿಸುವ, ಮುಂದಿನ ಪೀಳಿಗೆಗೂ ದಾಟಿಸುವ ಶಕ್ತಿ ಇದೆ. ರಾಮಾಯಣ ಮಹಾಭಾರತದಂತಹ ಮಹಾಕಾವ್ಯಗಳ ಕತೆಗಳೇ ಇರಲಿ, ಜನಪದ ಕತೆಗಳೇ ಇರಲಿ, ಮಾಸ್ತಿ, ಪ್ರೇಮಚಂದ್, ವೈಕಂ ತರಹದ ಕತೆಗಾರರೇ ಇರಲಿ, ಪುಟ್ಟಣ್ಣ ಕಣಗಾಲ್, ಸತ್ಯಜಿತ್ ರೇ, ಕುರುಸೋವಾ ತರಹದ ನಿರ್ದೇಶಕರ ಸಿನಿಮಾ ಕತೆಯೇ ಇರಲಿ, ಕತೆ ಎಂದೊಡನೆ ಕಿವಿ ನಿಮಿರುತ್ತದೆ, ಕಣ್ಣು ಅರಳುತ್ತದೆ. ತಕ್ಷಣ ಮರುಮಾತಿಲ್ಲದೆ ಹೊಸದೊಂದು ನಿರೂಪಣೆಗೆ ಮರುಳಾಗುತ್ತೇವೆ. ಅಷ್ಟೇ ಏಕೆ, ಮನುಷ್ಯನ ಇಡೀ ದೇಹವೇ ಅದಕ್ಕೆ ಸ್ಪಂದಿಸುತ್ತದೆ. ನಮ್ಮ ಅನುಭವ, ಸಂವೇದನೆ, ಕಲ್ಪನೆಗಳಿಗೆ ಕತೆಗಳು ಆಕಾರಕೊಡುತ್ತವೆ ಎಂಬುದು ಅವುಗಳ ಆಕರ್ಷಣೆಗೆ ಇರುವ ಮೂಲ ಕಾರಣ. ಕತೆಗಿರುವ ಈ ಅಪೂರ್ವ ಶಕ್ತಿ ಬಹುಶಃ ಜಗತ್ತಿನ ಅನೇಕ ಕಲೆಗಳಿಗೆ ಇದ್ದಂತಿಲ್ಲ. ಇಲ್ಲವೇ ಅನೇಕ ಕಲೆಗಳು ಕತೆಯನ್ನೇ ಆಧರಿಸಿರುತ್ತವೆ; ಕತೆಯಾಗಲು ಪ್ರಯತ್ನಿಸುತ್ತಿರುತ್ತವೆ. ಮಕ್ಕಳು ಕತೆ ಎಂದೊಡನೆ ಮಾಡುತ್ತಿರುವ ತುಂಟಾಟ ಬಿಟ್ಟು ಅಜ್ಜಿ, ಅಜ್ಜನ ಹತ್ತಿರ ಸರಿಯುತ್ತಾರೆ. ಹಾಗೆ ಕೇಳುಕುತೂಹಲ ಮೂಡುವುದು ಕೂಡ ಜಗತ್ತಿನೆಡೆಗಿನ ಅವರ ಮುಗ್ಧತೆಯಿಂದಾಗಿಯೇ. ಯಾವ ಪೂರ್ವಗ್ರಹ, ನಿರ್ಧಾರಗಳಿಲ್ಲದ ಮುಗ್ಧತೆಯೇ ಕತೆಯ ಜೀವಾಳ. 'ಅವನದೊಂದು ದೊಡ್ಡ ಕತೆ; ಸಿಕ್ಕಾಗ ಹೇಳುತ್ತೇನೆ' ಎಂದು ಫೋನಿನಲ್ಲಿ ಸಣ್ಣಗೆ ಉಸುರಿದವನಲ್ಲೂ ಒಂದು ಕತೆ ಇದೆ. ಎಂದೂ ಮುಗಿಯದ ಬದುಕೇ ಒಂದು ದೊಡ್ಡ ಕತೆ. ಉಳಿದವರು ಸೃಷ್ಟಿಸುವ, ಹೇಳುವ ಕತೆಗಳು ಅದರ ಉಪ ಕತೆಗಳು, ಇಲ್ಲವೇ ಮರು ಕಥನಗಳು. ಈ ಸಂಚಿಕೆ ಅಂತಹ ಮನಸೆಳೆಯುವ ಕತೆಗಳ ಗುಚ್ಛವಾಗಿದೆ.

ಮಳೆ ಎಲ್ಲರ ನಿರೀಕ್ಷೆಯನ್ನು ಮೀರಿ ತನ್ನದೇ ಲಯದಲ್ಲಿ ಬೀಳುತ್ತದೆ. ಪ್ರತಿ ಮಳೆಗಾಲವೂ ಹತ್ತಾರು ನೆನಪುಗಳನ್ನು ಹಿಂದಕ್ಕೆ ಬಿಡುತ್ತಿರುತ್ತದೆ. ಮಳೆಗಾಲ ಅನುಭವದ ನೀರುಂಡು ಹಸಿರಾಗಬೇಕಾದ ಮನುಷ್ಯನ ಬೆಳವಣಿಗೆಯ ಸೂಚಕ. ಈ ಬಾರಿ ಮಳೆಯ ವಸ್ತುವಿನ ಕತೆ, ಪ್ರಬಂಧ, ಕವಿತೆ ಹಾಗೂ ಹಾಯ್ಕುಗಳಿವೆ. ಇವು ಮಳೆಯ ಕೆಲವು ಮಿಂಚುಗಳನ್ನು ಓದುಗರಿಗೆ ಕೊಡಬಹುದು ಎಂಬುದು ನಮ್ಮ ನಿರೀಕ್ಷೆ.

ಕತೆಗಾರ, ಸಿನಿನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ ಅವರ ಸಂದರ್ಶನವನ್ನು ಈ ಸಂಚಿಕೆಯಲ್ಲಿ ಕೊಡಲಾಗಿದೆ. ಸಾಹಿತ್ಯ ಹಾಗೂ ಸಿನಿಮಾ ಈ ಎರಡೂ ಮಾಧ್ಯಮಗಳಲ್ಲಿ ವಿಶಿಷ್ಟ ಕೃತಿಗಳನ್ನು ಕೊಟ್ಟಿರುವ ಅಪರೂಪದ ಪ್ರತಿಭಾವಂತ ನಾಗತಿಹಳ್ಳಿ ಅವರ ಬಿಚ್ಚು ಮಾತುಗಳು ಈ ಬಾರಿಯ ವಿಶೇಷ.

**ಸಂದೀಪ ನಾಯಕ**

